ಇನ್ನೂ ಅಳವಡಿಸಬೇಕಾಗಿರುವ ಪೈಪುಗಳ ಉದ್ದ	:	1500 ಮೀಟರ್
ಖರ್ಚಾಗಿರುವ ಹಣ ರೂ.	:	70,000.00
ಈ ಕಾಮಗಾರಿಗೆ ಖರ್ಚಾಗಿರುವ ಹಣ ರೂ.	:	3.00 ಲಕ್ಷ
ಇನ್ನೂ ಬೇಕಾಗಿರುವ ಹಣ ರೂ.	:	1.21 ಲಕ್ಷ.

Vacant Posts of Linemen in K.E.B.

352 - Dr. M. Shanker Naik (Nelamangala) : Will the Deputy Chief Minister and Minister for powers as Tourism be pleased to state?

a) Whether it has come to the notice of the Govt. that thereis scarcity in Linemen's in KEB.

b) If so the number of vacant post of linemen in K.E.B.

c) The action taken by the Government to fill up these posts.

d) Is there any proposal before the Govt. to provide linemen to the Mandal Panchayat?

Sri J.H. Patel (Deputy Chief Minister) :

a) Yes.

b) Total number of vacant posts of Linemen and Asst. Linemen is 4542, as at the end of March 1995.

c) Government have directed KEB to send a proposal to fill up 5000 essential posts in various categories, which included the posts of Asst. Linemen also, Board had constituted a committee and its report was placed before the Booard for acceptance. After receipt of the propossal from the KEB the same will be examined and action taken as per rules.

d) No.

ರೆವಿನ್ಯೂ ಬಡಾವಣೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ

353 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ 28 ರೆವಿನ್ಯೂ ಬಡಾವಣೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ ಒದಗಿಸಲು 3 ಸಾವಿರ ರೂ. ಮುಂಗಡ ಹಣ ಡಿಪಾಸಿಟ್ ನೀಡಬೇಕೆಂದು ಸರ್ಕಾರ ಆದೇಶಿಸಿರುವುದು ನಿಜವಲ್ಲವೇ?

ಆ) 3 ಸಾವಿರ ರೂಪಾಯಿಗಳಲ್ಲದೇ ಗ್ರೌಂಡಿಂಗ್, ಕೇಬಲ್, ಮನೆಯೊಳಗೆ ವಿದ್ಯುತ್ ವೈರು ಮತ್ತು ಸ್ವಿಚ್‌ಗಳನ್ನು ಅಳವಡಿಸಲು ಸುಮಾರು 3050 ರೂ.ಗಳನ್ನು ಖರ್ಚು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸರ್ಕಾರದಿಂದ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾದ ನಿವೇಶನದಲ್ಲಿ ಕಟ್ಟಲಾದ ಮನೆಗಳಿಗೆ ವಿದ್ಯುಚ್ಛಕ್ತಿ ಪಡೆಯಲು ಮಂಡಳಿಯಿಂದ ಕೇವಲ 200 ರೂ.ಗಳನ್ನು ತೆಗೆದುಕೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಸುಮಾರು 300 ಮನೆಗಳಿಗೆ ವಿದ್ಯುಚ್ಛಕ್ತಿ ನೀಡಲು ಎಲ್ಲಾ ಸಾಮಗ್ರಿಗಳು ಸೇರಿ ಸುಮಾರು 3,00,000 (ಮೂರು ಲಕ್ಷ) ತಗಲಬಹುದೆಂದು ತಜ್ಞರ ವರದಿ ಇದಾಗ್ಯೂ ಮನೆಗೆ 1000 ರೂ. ತೆಗೆದುಕೊಳ್ಳುವ ಬದಲು 3000 ರೂ. ತೆಗೆದುಕೊಳ್ಳುತ್ತಿರುವ ಉದ್ದೇಶವೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಆ) ಹೌದು.

ಆ) ಗ್ರೌಂಡಿಂಗ್, ಕೇಬಲ್, ಮನೆಯೊಳಗೆ ವಿದ್ಯುತ್ ವೈರು ಮತ್ತು ಸ್ವಿಚಗಳನ್ನು ಅಳವಡಿಸುವ ಬಗ್ಗೆ ಮಾಡುವ ಖರ್ಚು ಗ್ರಾಹಕರಿಗೆ ಸಂಬಂಧಿಸುತ್ತದೆ. ಮತ್ತು ಈ ಮೊತ್ತವು ಗ್ರಾಹಕರು ಉಪಯೋಗ ಮಾಡುವ ಸಾಮಾನುಗಳನ್ನು ಅವಲಂಭಿಸುತ್ತದೆ.

ಇ) ಪ್ರಾಧಿಕಾರದಿಂದ ಮಂಜೂರಾತ ದಿನಿವೇಶನಗಳಲ್ಲಿ ಆಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು (ಇನ್ ಪ್ರಾಸ್ಟಕ್ಚರ್) ಸರ್ಕಾರವೇ ಅಥವಾ ನಗರಾಭಿವೃದ್ಧಿ ಪ್ರಾಧಿಕಾರವೇ ಕಲ್ಪಿಸುತ್ತದೆ. ಆದ್ದರಿಂದ ಠೇವಣಿ ಹಣ ಕಡಿಮೆ ಇರುತ್ತದೆ.

ಈ) ಸದರೀ ಬಡಾವಣೆಗಳು ಅನಧಿಕೃತವಾಗಿರುವುದರಿಂದ ಮೂಲಭೂತ ಸೌಲಭ್ಯ (ಇನಪ್ರಾಸ್ಟಕ್ಚರ್)ವನ್ನು ಕಲ್ಪಿಸಲು ಸಗಲುವ ಖರ್ಚನ್ನು ಗ್ರಾಹಕರುಗಳೇ ನೇರವಾಗಿ ಭರಿಸಬೇಕಾಗುತ್ತದೆ. ಇದರ ಸಾಧಕ ಭಾದಕಗಳನ್ನು ಸಮಗ್ರವಾಗಿ ಪರಿಶೀಲಿಸಿ ಈ 28 ಬಡಾವಣೆಗಳಲ್ಲಿರುವ ಸುಮಾರು 12 ಸಾವಿರ ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ವ್ಯವಸ್ಥೆ ಮಾಡಲು ಪ್ರತೀ ಸಾವಿರಕ್ಕೆ ತಗಲುವ ವೆಚ್ಚ ರೂ. 3000ಗಳಾಗುವುದೆಂದು ವೈಜ್ಞಾನಿಕ ರೀತಿಯಲ್ಲಿ ಲೆಕ್ಕಾಚಾರ ಮಾಡಲಾಗಿದೆ.

ಪುತ್ತೂರಿನ ಬೈಪಾಸ್ ರಸ್ತೆಯ ಕಾಮಗಾರಿ

355 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಪುತ್ತೂರಿನ ನಿಯೋಜಿತ ಬೈಪಾಸ್ ರಸ್ತೆಯ ಕಾಮಗಾರಿ ಯಾವ ಹಂತದಲ್ಲಿದೆ; ಹಾಗೂ ಯಾವ ದಿನಾಂಕದೊಳಗೆ ಈ ಕಾರ್ಯವನ್ನು ಪೂರ್ತಿಗೊಳಿಸಲಾಗುವುದು?

ಆ) ಈ ಕಾಮಗಾರಿ ಪೂರ್ತಿಯಾಗಲು ಇನ್ನೂ ಎಷ್ಟು ಹಣ ಬೇಕಾಗುವುದು? ಈ ವರ್ಷ